# ನೈಜ ಪ್ರೀತಿಯೇ ಜೀವನದ ಸಂಪತ್ತು

ಸಂಗ್ರಹ: ಆರ್.ಎಸ್. ಪೂರ್ಣಾನಂದ

ಬಹಳ ಹಿಂದಿನ ಕಾಲ. ಒಂದು ಗುಡ್ಡಗಾಡು ಪಂಗಡದಲ್ಲಿ ಒಂದು ಸಂಪ್ರದಾಯವಿತ್ತು. ಅವರಲ್ಲಿ ಒಬ್ಬ ಹುಡುಗನಿಗೆ ಆರು ವರ್ಷವಾದಾಗ ಅವನು ಒಂದು ಪೌರುಷದ ಪರೀಕ್ಷೆ ಗೆಲ್ಲಬೇಕಿತ್ತು. ಪರೀಕ್ಷೆಯ ಬಳಿಕವೇ ಅವನನ್ನು ಶೂರ, ಗಂಡು ಎಂದು ಪರಿಗಣಿಸುತ್ತಿದ್ದರು.

ಸಂಜೆಯ ಸೂರ್ಯ ಮುಳುಗಿದ ಬಳಿಕ, ಕುಲದ ಹಿರಿಯರು ಬಾಲಕನನ್ನು ದಟ್ಟಡವಿಯ ಮಧ್ಯಭಾಗಕ್ಕೆ ಕರೆತಂದು, ಒಂದೆಡೆ ಕೂರಿಸಿ, ಅವನ ಸುತ್ತಲೂ ಒಂದು ದೊಡ್ಡ ವೃತ್ತವನ್ನು ಬರೆದರು. ಇಡೀ ರಾತ್ರಿ ಅವನು ಅಲ್ಲಿಂದ ಅಲುಗಾಡಬಾರದು, ಗೆರೆಯಿಂದಾಚೆಗೆ ಬರಬಾರದು ಎಂದು ಹೇಳಿದರು. ಹಾಗೆ ಅವನನ್ನು ಏಕಾಂಗಿಯಾಗಿ ಬಿಟ್ಟು ಅವರೆಲ್ಲ ಹೊರಟುಹೋದರು.

ಕತ್ತಲಾಯಿತು. ಸುತ್ತ ಏನೂ ಕಾಣದಂತಾಯಿತು. ಬಾಲಕನಿಗೋ ಭಯ. ರೊಯ್ಯನೆ ಬೀಸುವ ಕಾಡೊಳಗಿನ ತಣ್ಣನೆ ಕೊರೆಯುವ ಗಾಳಿ; ಎಲೆಗಳ, ಗಿಡಗಳ ಅಸ್ಪಷ್ಟ ಶಬ್ದಗಳು. ದೂರದಲ್ಲಿ ತೋಳ, ಹುಲಿಗಳ ಆರ್ಭಟ. ಕಾಡಿನೊಳಗೆ ಕರಡಿ, ಚಿರತೆ, ಕಾಡುಬೆಕ್ಕು ಮತ್ತಿತರ ಹಿಂಸ್ರ ಪಶುಗಳಿರುವುದು ಬಾಲಕನಿಗೆ ಗೊತ್ತಿತ್ತು. ಮತ್ತೆ ಮತ್ತೆ ಭಯದ ಬೆವರು.

ರಾತ್ರಿ ಹೊತ್ತು. ಕಲ್ಲು-ನೀರು ಕರಗುವ ಸಮಯ. ಹುಡುಗ ಅಳುತ್ತಲೇ ಇದ್ದ. ಕಣ್ಣೆವೆಗಳಲ್ಲಿ ನಿದ್ದೆ ಕವಿದು ಬರುತ್ತಿತ್ತು. ಅಲ್ಲೇ ಮುದುರಿಕೊಂಡ. ಅಚ್ಚರಿಯೆಂದರೆ ಆ ಭಯದಲ್ಲೂ ಅವನು ನಿದ್ದೆಹೋದ.

ಬೆಳಗಾಯಿತು. ಎದ್ದು ನೋಡುತ್ತಾನೆ, ಸದ್ಯ, ತನಗೇನೂ ಆಗಿಲ್ಲ! ತನ್ನ ಸುತ್ತ ಇದ್ದ ವೃತ್ತದ ಆಚೆ ಅಪ್ಪ ಕಾಯುತ್ತಿದ್ದಾನೆ! ಅವನೂ ಶೂರ. ಕೈಯಲ್ಲಿ ಬಿಲ್ಲು-ಬಾಣಗಳನ್ನು ಹಿಡಿದು ಸನ್ನದ್ಧನಾಗಿ ನಿಂತಿದ್ದಾನೆ, ಮಗನಿಗೆ ಏನಾದರೂ ಆಪತ್ತು ಬಂದರೆ ತಕ್ಷಣವೇ ರಕ್ಷಿಸುವುದಕ್ಕೆ.

ಅಸಹಾಯಕನಾದ ತನ್ನ ಮಗುವನ್ನು ರಕ್ಷಿಸಲು ತಂದೆ ರಾತ್ರಿಯಿಡೀ ಎಚ್ಚರವಾಗಿ ಕಾಯುತ್ತಿದ್ದ! ಪರಿಣಾಮ, ಆ ಹುಡುಗ ಬೆಳೆದು ನಿಂತಾಗ, ಒಂದು ಹಿರಿದಾದ ಚೈತನ್ಯವು ಜೀವಮಾನದುದ್ದಕ್ಕೂ ತನ್ನ ಜೊತೆಯಲ್ಲಿದ್ದು, ತನ್ನಲ್ಲಿ ಧೈರ್ಯ ಮತ್ತು ಪರಾಕ್ರಮವನ್ನು ತುಂಬುತ್ತಿದೆ ಎಂಬ ತಿಳುವಳಿಕೆ ಅವನ ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಂತುಬಿಟ್ಟಿತು.

ಹೀಗೆಯೇ, ಕರಾಳ ರಾತ್ರಿಗಳಲ್ಲಿ, ದುಃಖ-ದುಮ್ಮಾನಗಳಲ್ಲಿ ನಮ್ಮನ್ನು ಸಂರಕ್ಷಿಸುವ 'ಸೃಷ್ಟಿಕರ್ತ' ನಮ್ಮೆಲ್ಲರ ಪಾಲಿಗೂ ಇದ್ದಾನೆ. ಪುರಂದರದಾಸರು ಹೇಳಿರುವಂತೆ "ತಲ್ಲಣಿಸದಿರು ಕಂಡ್ಯ, ತಾಳು ಮನವೇ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ." ಶ್ರೀಕೃಷ್ಣ ಭಗವದ್‌ಗೀತೆಯಲ್ಲಿ ಹೇಳಿದ್ದಾನೆ, "ನಾನೇ ಎಲ್ಲರ ಹೃದಯದಲ್ಲಿ ಅಂತರ್ಯಾಮಿಯಾಗಿರುವೆ. ಹಾಗೆ ಇದ್ದು ಎಲ್ಲರನ್ನು ರಕ್ಷಿಸುವೆ." ಎಂಥ ಕಷ್ಟಗಳ ನಡುವೆ ನೀವಿದ್ದರೂ ಸರಿ, ಭಗವಂತ ನಿಮ್ಮ ಪಕ್ಕದಲ್ಲಿ ಇರುತ್ತಾನೆ ಎಂಬುದನ್ನು ನೆನಪಿಡಿ.

ದೊರೆ ಡೇವಿಡ್ ಬೈಬಲ್ಲಿನಲ್ಲಿ ಹೇಳುತ್ತಾನೆ; "ಭಗವಂತನೇ ನನ್ನ ಜೀವನದ ಉಸಿರು. ನಾನು ಅವನಿಗೆ ಮಾತ್ರ ಹೆದರುತ್ತೇನೆ. ನನ್ನ ವಿರುದ್ಧ ಇಡೀ ಭೂಮಂಡಲವೇ ತಿರುಗಿಬಿದ್ದರೂ ನನ್ನ ಈ ನಂಬಿಕೆ ಅಚಲ. ನನ್ನ ಕಷ್ಟದ ಕ್ಷಣಗಳಲ್ಲಿ ಅವನು ನನ್ನನ್ನು ತನ್ನ ವಿಶಾಲವಾದ ಕೊಡೆಯಡಿಯಲ್ಲಿ ರಕ್ಷಿಸುತ್ತಾನೆ, ತನ್ನ ಕುಟೀರದಲ್ಲಿ ಆಶ್ರಯ ನೀಡಿ ನನ್ನನ್ನು ಕಾಪಾಡುತ್ತಾನೆ."

ನಂಬಿಕೆ, ಶ್ರದ್ಧೆ ಎನ್ನುವುದು ಭಯಕ್ಕಿಂತ ಬಲಿಷ್ಠವಾದುದು. ಮನಸ್ಸಿನಲ್ಲಿ ಶ್ರದ್ಧೆಯನ್ನು ತುಂಬಿಕೊಂಡಾಗ, ಹೃದಯದಲ್ಲಿರುವ ಭಯಗಳ ಸಮೂಹ ತಾನಾಗಿ ಪಲಾಯನಗೈಯುವುದನ್ನು ನೀವು ನೋಡುವಿರಿ. ಶ್ರದ್ಧೆಯುಳ್ಳವರು ಎಂಥ ಅಡೆತಡೆಗಳನ್ನೂ ಗೆಲ್ಲಬಲ್ಲರು. ಏಕೆಂದರೆ ದೇವರು ಎಲ್ಲ ಯುದ್ಧಗಳನ್ನೂ ಅವರಿಗಾಗಿ ಗೆದ್ದುಕೊಡುತ್ತಾನೆ. ಗೀತೆಯಲ್ಲಿ ಶ್ರೀಕೃಷ್ಣ ಹೇಳಿರುವಂತೆ, "ನಾನು ನಿಮಿತ್ತಮಾತ್ರ ಎಂದುಕೊಂಡು ದುಡಿದರೆ ಸಾಕು." ಉಳಿದೆಲ್ಲ ಚಿಂತೆಯನ್ನೂ ಅವನಿಗೆ ಒಪ್ಪಿಸಿಬಿಡಬೇಕು. ನಾವು ಕೆಲವೊಮ್ಮೆ ಮಾಡಬಹುದಾದ ಅತ್ಯುತ್ತಮ ಕೆಲಸ ಎಂದರೆ, ಎಲ್ಲ ಪ್ರಯತ್ನಗಳನ್ನೂ ಮಾಡಿದ ಬಳಿಕ, ಇಡೀ ಪ್ರಸಂಗವನ್ನು ಶರಣಾಗತಿಯ ಭಾವದೊಂದಿಗೆ ಭಗವಂತನಿಗೆ ನಿವೇದಿಸಿಬಿಡುವುದು. ನಮ್ಮ ಸಮಸ್ಯೆ-ಸಂಕಟಗಳನ್ನು ಆ ಹಿರಿಯ ಹಸ್ತಕ್ಕೆ ಒಪ್ಪಿಸಿಬಿಟ್ಟರೆ, ಉಳಿದೆಲ್ಲವನ್ನು ಅವನಿಗೆ ವಹಿಸಿಬಿಟ್ಟರೆ ನಾವು ನಿರಾಳವಾಗಿರಬಹುದು.

ವಿದ್ಯಾಭ್ಯಾಸದ ವಿವಿಧ ಘಟ್ಟಗಳಲ್ಲಿ ಮಗು ಹಲವಾರು ಪರೀಕ್ಷೆಗಳನ್ನು ಎದುರಿಸಬೇಕು; ಅನಂತರವೇ ಅದಕ್ಕೆ ಪದವೀಧರನ ಪಟ್ಟ ದೊರೆಯುತ್ತದೆ. ನಾವೂ ಕೂಡ ಹಾಗೆಯೇ- ಒಂದೇ ವ್ಯತ್ಯಾಸವೆಂದರೆ, ನಾವೆಲ್ಲರೂ ಜೀವನಶಾಲೆಯ ವಿದ್ಯಾರ್ಥಿಗಳು.

ನಮ್ಮ ಪರಮ ಸೌಭಾಗ್ಯ, ನಾವು ಅತ್ಯಂತ ಶ್ರೇಷ್ಠ ಗುರುವಿನ ಪಾದಮೂಲದಲ್ಲಿ ಕುಳಿತು ವಿದ್ಯೆ ಕಲಿಯುತ್ತಿದ್ದೇವೆ. ಅವನು ಸರ್ವಶಕ್ತ. ಅವನ ಪ್ರೇಮಮಯ ಹೃದಯ ಸದಾ ನಮಗಾಗಿ ತುಡಿಯುತ್ತಿರುತ್ತದೆ. ಅವನ ಆಣತಿಯಿಲ್ಲದೆ ಯಾವುದೂ ನಡೆಯದು.

ನಾವು ಸನ್ನಡತೆಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತ ಹೋದಂತೆ ಭಗವಂತನು ನಮ್ಮ ಹೃದಯದಲ್ಲಿ ಅವನು ಅಚಲವಾದ ಭಕ್ತಿಯನ್ನು ನೆಲೆಗೊಳಿಸುತ್ತಾನೆ. ಅಖಂಡವಾದ ಶ್ರದ್ಧೆ ಮತ್ತು ಅಪಾರವಾದ ಧೈರ್ಯ ನಮ್ಮಲ್ಲಿ ಹುಟ್ಟುವುದಕ್ಕೂ

ಅವನ ಅಸೀಮ ಕರುಣೆಯೇ ಕಾರಣ.

ನಾವು ಭಗವಂತನಿಗಾಗಿ ಹಾತೊರೆಯುತ್ತಿದ್ದರೆ, ಅವನು ಸಮನಾಗಿ ಕಾತರಿಸುತ್ತಾನೆ. ಷೇಕ್ಸ್‌ಪಿಯರ್ ಒಂದೆಡೆ ಹೇಳುವಂತೆ, "ಭಗವಂತನೇ ನನ್ನ ನಂಬಿಕೆ, ನನ್ನ ಉಸಿರು, ನನ್ನ ಊರುಗೋಲು ಮತ್ತು ಕತ್ತಲಲ್ಲಿ ನನಗೆ ದಾರಿದೀಪ."

ಶ್ರದ್ಧೆ ಎಂದರೆ ದೃಢವಾದ ನಂಬಿಕೆ. ನಾವು ಯಾವುದನ್ನು ಈ ದೇಹ ಮತ್ತು ಇಂದ್ರಿಯಗಳ ಮೂಲಕ ಪರಿಭಾವಿಸಲು ಸಾಧ್ಯವಿಲ್ಲವೋ ಅಂಥದರ ಕುರಿತು ಪ್ರಾಂಜಲವಾದ ನಂಬಿಕೆ. ಭಗವಂತನು ನಮ್ಮ ಮೇಲಿಟ್ಟಿರುವ ಮಾತೃವಾತ್ಸಲ್ಯದಲ್ಲಿ ನಂಬಿಕೆ ಇಡಿ. ಅವನನ್ನು ನಾವು ಪ್ರೀತಿಸುವುದಾದರೆ, ಅವನನ್ನು ನಾವು ಖಂಡಿತವಾಗಿಯೂ ನಂಬುವೆವು.

ಆದ್ದರಿಂದ, ಗೆಳೆಯರೆ, ಕತ್ತಲೆಯ ರಾತ್ರಿಯ ಕರಾಳತೆಗೆ ಅಂಜಬೇಡಿ. ಬೆಳಗಿನ ಸೂರ್ಯನ ಹೊಂಗಿರಣ ನಮ್ಮೆದುರು ಹರಡಿದಾಗ ಅದೇ ಮಹಾನ್ ಚೈತನ್ಯವು ನಮ್ಮನ್ನು ರಕ್ಷಿಸುತ್ತ ನಿಂತಿರುವುದು ನಮಗೆ ಕಂಡುಬರುತ್ತದೆ. ಮತ್ತೆ ನೆನಪಿಡಿ, ಅವನು ಎಂದೂ ಯಾವ ಯುದ್ಧದಲ್ಲೂ ವಿಮುಖನಾದದ್ದಿಲ್ಲ, ಸೋತದ್ದಿಲ್ಲ.

ನಾವು ಒಬ್ಬೊಬ್ಬರಿಗೆ ಪ್ರೀತಿಯನ್ನು ಹಲವಾರು ರೀತಿಗಳಲ್ಲಿ ವ್ಯಕ್ತಪಡಿಸಬಹುದು.

ನಾನು ಹಿಂದೊಮ್ಮೆ ಒಂದು ಕಥೆ ಕೇಳಿದ್ದೆ. ಅಪರೂಪದ ಖಾಯಿಲೆಯಿಂದ ನರಳುತ್ತಿದ್ದ ಹುಡುಗಿಯೊಬ್ಬಳ ಕಥೆ ಅದು. ಅವಳನ್ನು ಬದುಕಿಸಬೇಕಾದರೆ ಇದ್ದದ್ದು ಒಂದೇ ದಾರಿ. ಅವಳ ಐದು ವರ್ಷದ ತಮ್ಮನ ರಕ್ತವನ್ನು ಅವಳಿಗೆ ನೀಡಬೇಕಾಗಿತ್ತು. ಅಚ್ಚರಿಯೆಂದರೆ ಈ ಹಿಂದೆ ಅವನಿಗೂ ಇದೇ ಖಾಯಿಲೆ ಬಂದಿದ್ದು, ಈಗ ಗುಣಮುಖನಾಗಿದ್ದ. ವೈದ್ಯರು ಆ ಹುಡುಗನಿಗೆ ರೋಗವನ್ನು ಕುರಿತ ಎಲ್ಲ ಸಂಗತಿಗಳನ್ನೂ ವಿವರಿಸಿ ಹೇಳಿ, ಅಕ್ಕನಿಗೆ ರಕ್ತ ನೀಡಲು ಸಿದ್ಧನಿರುವೆಯಾ? ಎಂದು ಅವನನ್ನು ಕೇಳಿದರು.

ಒಂದು ದೀರ್ಘ ನಿಟ್ಟುಸಿರು ಬಿಟ್ಟು ಹುಡುಗ ಹೇಳಿದ, "ಹೂಂ, ಖಂಡಿತ, ಅಕ್ಕನಿಗಾಗಿ ನಾನು ರಕ್ತ ನೀಡಲು ಸಿದ್ಧ". ಟ್ರಾನ್ಸ್‌ಫ್ಯೂಶನ್ (ರಕ್ತವನ್ನು ವರ್ಗಾಯಿಸುವ ಪ್ರಕ್ರಿಯೆ) ಪ್ರಾರಂಭವಾಗುತ್ತಿದ್ದ ಹಾಗೆ, ಹುಡುಗ ಕಣ್ಣೀರು ತುಂಬಿಕೊಂಡು, ನಡುಗುವ ದನಿಯಲ್ಲಿ ವೈದ್ಯರನ್ನು ಕೇಳಿದ: "ಇದಾದ ಬಳಿಕ ನಾನು ಸತ್ತುಹೋಗುವ ಸಂಭವ ಉಂಟೆ"?

ಆ ಹುಡುಗ ತನ್ನ ಎಲ್ಲ ರಕ್ತವನ್ನೂ ಅಕ್ಕನಿಗೆ ಕೊಟ್ಟುಬಿಡಬೇಕೇನೊ ಎಂಬ ಗೊಂದಲಕ್ಕೆ ಒಳಗಾಗಿದ್ದ.

"ಒಬ್ಬ ಸ್ನೇಹಿತನಿಗಾಗಿ ಪ್ರಾಣ ಕೊಡುವುದಕ್ಕಿಂತ ಮಿಗಿಲಾದ ಪ್ರೀತಿ ಮತ್ತೊಂದಿಲ್ಲ" ಎಂದು ಬೈಬಲ್ ಹೇಳುತ್ತದೆ. ಸದಾಕಾಲಕ್ಕೂ ನಿಲ್ಲುವ ಶಾಶ್ವತ ಅಂಶಗಳು ಇವು; **ಶ್ರದ್ಧೆ, ಭರವಸೆ ಮತ್ತು ಪ್ರೀತಿ.** ಇವುಗಳಲ್ಲಿ ಎಲ್ಲಕ್ಕಿಂತಲೂ ಪ್ರಮುಖವಾದುದು ಪ್ರೀತಿ.

ಪ್ರೀತಿಸುವ ಅದ್ಭುತ ಶಕ್ತಿ ಮಕ್ಕಳಲ್ಲಿ ಇರುತ್ತದೆ. ಅವರು ಮುಗ್ಧತೆಯಲ್ಲಿ, ಭಗವಂತನ ಪ್ರೀತಿಧಾರೆಯಲ್ಲಿ ಮಿಂದು ತೊಯ್ದು ಹೋಗಿರುತ್ತಾರೆ. ಅವರಿಗೆ ಗೊತ್ತಿರುವುದು ಒಂದೇ ಸಂಗತಿ. ಎಲ್ಲವನ್ನೂ, ಎಲ್ಲರನ್ನೂ ಅಕಾರಣವಾಗಿ ಪ್ರೀತಿಸುವುದು.

ಇಂಥ ಶಿಶುಸಹಜ ಪ್ರೀತಿಯನ್ನು ನಮ್ಮಲ್ಲಿ ಬೆಳೆಸಿಕೊಳ್ಳಲು ನಾವು ಸದಾ ಯತ್ನಿಸಬೇಕು. ನಾವು ಇದಕ್ಕೆ ಮೊದಲು ಹೇಗೇ ಜೀವಿಸಿದ್ದರೂ ಪರವಾಗಿಲ್ಲ, ಕಾಲ ಈಗಲೂ ಮಿಂಚಿಲ್ಲ. ವಯಸ್ಸಾದವರಿಗೂ ಕೂಡ ಮುಗ್ಧತೆ, ಸುಖ ಮತ್ತು ಸಂತೋಷಗಳಿಗೆ ಮತ್ತೆ ಹಿಂದಿರುಗಲು ದಾರಿ ಇದ್ದೇ ಇದೆ. "ಎಲ್ಲಕ್ಕಿಂತ ಮಿಗಿಲಾಗಿ, ಪರಸ್ಪರ ಪ್ರೀತಿಸಿರಿ. ಏಕೆಂದರೆ, ನಿಮ್ಮ ಕೋಟಿ ಕೋಟಿ ದೋಷಗಳನ್ನು ಒಂದು ಪ್ರೀತಿಯ ನುಡಿ ಮುಚ್ಚಿಬಿಡಬಹುದು."

ಅಂದರೆ, ನಮ್ಮನ್ನು ಹೊಸದುಗೊಳಿಸಿಕೊಳ್ಳುವ ಶಕ್ತಿ ನಮ್ಮಲ್ಲಿಯೇ ಇದೆ, ನಾವೆಲ್ಲರೂ ಒಬ್ಬರನ್ನೊಬ್ಬರು ಅತಿಶಯವಾಗಿ ಪ್ರೀತಿಸಬಹುದಾದರೆ ಈ ಜಗತ್ತು ಎಷ್ಟು ಸುಂದರವಾಗಿ ಇರಬಲ್ಲದು!

ನಮ್ಮ ಮಾತಿನ ದನಿಯಿಂದ, ಬಳಸುವ ಪದಗಳಿಂದ, ನಮ್ಮ ಕ್ರಿಯೆಗಳಿಂದ ಮತ್ತು ಇವೆಲ್ಲಕ್ಕಿಂತಲೂ ಮುಖ್ಯವಾಗಿ, ಇವೆಲ್ಲವುಗಳನ್ನು ಪ್ರಚೋದಿಸುವ ಅಂತಃಶಕ್ತಿಯ ಮೂಲಕ ನಮ್ಮಲ್ಲಿರುವ ಪ್ರೀತಿಯ ಭಾವನೆಗಳು ಅಭಿವ್ಯಕ್ತವಾಗುತ್ತವೆ.

ಯಾರಾದರೊಬ್ಬರಿಗೆ ಗುಟ್ಟಾಗಿ ಒಂದು ಉಪಕಾರ ಮಾಡಿ. ನಿಮ್ಮ ಸಹೋದ್ಯೋಗಿಯ ಟೇಬಲ್ಲಿನ ಮೇಲಿನ ಒಂದು ಸಣ್ಣ ಕೆಲಸವಿರಬಹುದು, ಪರಿಚಿತರಿಗೆ ಕಳಿಸುವ ಒಂದು ಶುಭಾಶಯ ಪತ್ರವಿರಬಹುದು, ಪಕ್ಕದ ಮನೆಯವರು ಊರಲ್ಲಿಲ್ಲದ ಸಮಯದಲ್ಲಿ ಒಂದೆರಡು ದಿನ ಅವರ ಕೈತೋಟದ ಗಿಡಗಳಿಗೆ ನೀರೆರೆಯುವುದು – ಇಂಥ ಸಣ್ಣಪುಟ್ಟ ವಿಷಯಗಳೇ ಆಗಿರಬಹುದು. ಪ್ರೀತಿ ಎಂಬುದು ನೀವು ಕೊಟ್ಟಷ್ಟೂ ಮತ್ತೆ ಮತ್ತೆ ನಿಮ್ಮೆಡೆಗೆ ಹಿಂದಿರುಗುವ ಆನಂದದ ಧಾರೆ. ಒಂದು ನಗು, ಒಂದು ಮಂದಹಾಸ, ಒಂದು ಪ್ರಾರ್ಥನೆ ಇವು ಇತರರಿಗೆ ಅಂಥ ಆನಂದವನ್ನು ತಂದುಕೊಡಬಲ್ಲುವು.

ಸಮೃದ್ಧವಾದ ಬದುಕನ್ನು ಬಾಳಬೇಕಾದರೆ ಒಂದೇ ದಾರಿ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಸುಮ್ಮನೆ ನೀಡುತ್ತ ಹೋಗುವ ಕಲೆ. ವಾರಕ್ಕೊಮ್ಮೆಯಾದರೂ ಪರೋಪಕಾರ ಮಾಡುವ ಜನ, ಯಾವ ಉಪಕಾರವನ್ನೂ ಮಾಡದವರಿಗಿಂತ – ಎರಡೂವರೆ ಪಟ್ಟು ಸಂಖ್ಯೆಯಲ್ಲಿ – ದೀರ್ಘಾಯುಷ್ಯವನ್ನು ಹೊಂದಿರುತ್ತಾರೆ. ಅಂದ ಮೇಲೆ, ಆರೋಗ್ಯ ಮತ್ತು ನೆಮ್ಮದಿಯ ಜೀವನಕ್ಕಾಗಿ ಬೇರೆಯವರಿಗೆ ಉಪಕಾರ ಮಾಡುವುದು ಅತ್ಯಂತ ಸರಳವಾದ ಮಾರ್ಗ. ಪ್ರೀತಿ ಎಂಬುದು ಯಾವಾಗಲೂ ಉದಾತ್ತವಾಗಿರುತ್ತದೆ. ವಿನಯದಿಂದ ಮಧುರವಾಗಿರುತ್ತದೆ; ಪ್ರೀತಿ ಎನ್ನುವುದು ಭೂಮಿಯ ಮೇಲಿನ ಪ್ರಬಲವಾದ, ಅತ್ಯಂತ ಪ್ರಬಲವಾದ, ಅಸ್ತ್ರ.